(c) **Charges against the Ministers.**

ಶ್ರೀ ಎಂ. ನಾಗಪ್ಪ.—ನಾನು ಇನ್ನೊಂದು ನೋಟೀಸ್ ರೂಲ್ 312 ಪ್ರಕಾರ ಕೊಟ್ಟಿದ್ದೆ. ಮುಖ್ಯಮಂತ್ರಿಯವರ ಮತ್ತು ಮಂತ್ರಿಮಂಡಲದ ಮೇಲೆ 40 ಜನ ಮಾನ್ಯ ಸದಸ್ಯರು ರುಜು ಹಾಕಿ ಕೆಲವು ಚಾರ್ಜುಗಳನ್ನು ಮಾಡಿ ಕಳುಹಿಸಿದ್ದೇವೆ. ಅದನ್ನು ಕೇಂದ್ರದ ಗೃಹ ಖಾತೆಯವರು ಇವರಿಗೆ ರೆಫರ್ ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡುವುದನ್ನು ಇವೇಡ್ ಮಾಡುತ್ತಿದ್ದಾರೆ. ಇದು ಜನರಿಗೆ ಕಳವಳನ್ನುಂಟುಮಾಡತಕ್ಕ ವಿಚಾರ. ಇದಕ್ಕೆ ಏಕೆ ಉತ್ತರ ಕೊಡಲು ನಿಧಾನ ಮಾಡುತ್ತಿದ್ದಾರೆ? ಮತ್ತು ಆ ಚಾರ್ಜಸ್ ಏನು ಎಂಬುದು ಈ ಸಭೆಗೆ ಗೊತ್ತಾಗಬೇಕು. ಆದ್ದರಿಂದ ದಯವಿಟ್ಟು ಕ್ಯಾಬಿನೆಟ್ ಮಂತ್ರಿಯವರ ಪೈಕಿ ಒಬ್ಬರು ಅದು ಏಕೆ ತಡತಾಗುತ್ತಿದೆ, ಏನು ಚಾರ್ಜಸ್ ಮಾಡಿದ್ದಾರೆ ಎನ್ನುವುದರ ಬಗ್ಗೆ ಹೇಳಿಕೆ ಕೊಡಲು ತಾವು ಡೈರಕ್ಷನ್ಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Rule 312 permits small clarifications within a couple of minutes. Therefore I am sorry I cannot admit this notice. Hon. Member have got other parliamentary opportunities and they may seek remedies.

B.W.S. and S. Board—Contracts on Cauvery Work

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ತಮಗೆ ಬೇಸರವಾಗದಿದ್ದರೆ ಒಂದು ವಿಚಾರವನ್ನು ಎತ್ತುತ್ತೇನೆ. ನೀವು ಹೇಳುವಾಗ, ನಾವೇನೋ ಇಲ್ಲಿ ಕಾಲಹರಣ ಮಾಡುವುದಕ್ಕೆ ಬಂದಿದ್ದೇವೋ ಏನೋ ಎನ್ನುವ ಹಾಗೆ ಕಾಣುತ್ತದೆ. ನಾನು ಇವತ್ತು ರೂಲ್ 312ರ ಪ್ರಕಾರ ಒಂದು ಸೂಚನೆಯನ್ನು ಕಳಿಸಿದ್ದೆ. ಅದು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸ್ಯಿವರೇಜ್ ಬೋರ್ಡಿಗೆ ಸಂಬಂಧಪಟ್ಟದ್ದು. ಕಾವೇರಿ ನೀರಿನ ಸಪ್ಲೈ ಬಗ್ಗೆ ಇ. ಸಿ. ಸಿ. ಕಂಪೆನಿಗೆ ಕಂಟ್ರಾಕ್ಟ್ ಕೊಟ್ಟಿದ್ದರ ಬಗ್ಗೆ, ಕ್ಯಾಷ್ ಅಡ್ವಾನ್ಸ್ 30 ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಈ ಸಭೆಯ ಅಭಿಪ್ರಾಯಕ್ಕೆ ಮಣಿದು, ಭಯ ಬಿದ್ದು, ತಪ್ಪು ಮಾಡತಕ್ಕದ್ದು ನರಿಯಲ್ಲ, ಎಂದು ತಿಳಿದು, ಅದನ್ನು ಕೈಬಿಟ್ಟು ಹಿಂದೆ ಯಾವ ರೇಟ್... .. . ...

Mr. SPEAKER.—Today that matter is permitted to be discussed at 6 P.M. That is the matter to which the hon. Member is making a reference. I have allowed it. Hon. Member also can participate in the discussion about Bangalore Water and Sewerage Board contract.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದು ಅರ್ಧ ಗಂಟೆ ಸಮಯದಲ್ಲಿ ಆಗುವ ವಿಷಯವಲ್ಲ. ಈಗಿರತಕ್ಕ ಬೋರ್ಡು ಏನಿದೆ, ಅದರ ಆಯುಸ್ಸು ಮುಗಿದು, ನಾಳೆ ಹೊಸ ಬೋರ್ಡು ರಚನೆಯಾಗುತ್ತದೆ. ಅವರು ಅಧಿಕಾರ ಬಿಟ್ಟು ಹೋಗತಕ್ಕ ಸಂದರ್ಭದಲ್ಲಿ.....

Mr. SPEAKER—In view of the fact that I have allowed discussion to this subject, I do not give permission to the hon. Member to move it under Rule 312.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇಂಥದ್ದೇ ಒಂದು ನಿರ್ಣಯವನ್ನು ನಾವು ಅಡ್ಜರ್ನ್‌ಮೆಂಟ್ ಮೋಷನ್‌ನಾಗಿ ಕಳಿಸಿದ್ದೇವೆ. How is it that on the condition that it will be taken up at the end of the day the hon. Member has withdrawn his Question on this subject?

Mr. SPEAKER.—I have already stated that there is no condition, nor is there any understanding. If the hon. member does not choose to press his Question, I cannot be held responsible for that. So far as the